SCCH – 01
MVC No.3476/2024
RW1

**BEFORE THE MOTOR ACCIDENT CLAIMS TRIBUNAL, CHIEF JUDGE, COURT OF SMALL CAUSES JUDGE, BENGALURU.**

**MVC.NO.3476/2024**

**R.W-1**

| | |
|---|---|
| Name | Dr.B.Harshavardhana |
| Father's name | K.V.Bhaskar |
| Age | 55 years |
| Occupation | Medical Officer, Magadi General hospital |
| Residence | Bengaluru |

**ಸಾಕ್ಷಿಗೆ ದಿನಾಂಕಃ 28.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: 1ನೇ ಎದುರುದಾರರ ಪರ ವಕೀಲರಾದ ಶ್ರೀ.ಜೆ.ಎಸ್. ರವರಿಂದಃ**

1) ಮಾಗಡಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾನು ದಿಃ**18.07.2025** ರಿಂದ ವೈದ್ಯಾಧಿಕಾರಿಯಾಗಿ ಕರ್ತವ್ಯ ಮಾಡುತ್ತಿದ್ದೇನೆ. ನ್ಯಾಯಾಲಯವು ಕಳುಹಿಸಿದ್ದ ಸಮನ್ಸ್ ನಲ್ಲಿ ನಮೂದು ಮಾಡಿದ್ದಂತಹ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

2) ಸಾರ್ವಜನಿಕ ಆಸ್ಪತ್ರೆ, ಮಾಗಡಿದಲ್ಲಿ ಇಟ್ಟಿರುವಂತಹ **Medico Legal Case Register** ರ ಮೂಲ ದಾಖಲೆ ಮತ್ತು ಇದೇ ದಾಖಲೆಯಲ್ಲಿ

ದಿಃ **05.04.2024** ರಂದು ಕ್ರಮ ಸಂಖ್ಯೆ **9410** ಅಡಿಯಲ್ಲಿ ಇರುವಂತಹ ಹಾಳೆಯ ಒಂದು ನೆರಳಚ್ಚು ಪ್ರತಿಯನ್ನು ಸಹಾ ಈ ಸಾಕ್ಷಿದಾರರು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ನೆರಳಚ್ಚು ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ನೆರಳಚ್ಚು ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ನೆರಳಚ್ಚು ಪ್ರತಿಗಳನ್ನು ನಿ.ಆರ್.**1** ಮತ್ತು ನಿ.ಆರ್.**2** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ.ಬಿ ಎನ್ ಎಸ್ ವಕೀಲರಿಂದಃ</u>**

3) ರಸ್ತೆ ಅಪಘಾತದ ಹಿನ್ನಲೆಯಲ್ಲಿ ಯಾವುದೇ ಒಬ್ಬ ವ್ಯಕ್ತಿಯು ನಮ್ಮ ಆಸ್ಪತ್ರೆಗೆ ಬಂದರೆ ಆಗ ನಮ್ಮ ಆಸ್ಪತ್ರೆಯಲ್ಲಿ ನಾವು ಆ ವಿವರಗಳನ್ನು ಎಂ.ಎಲ್.ಸಿ ರಿಜಿಸ್ಟರ್ ದಾಖಲೆಯಲ್ಲಿ ನಮೂದು ಮಾಡುತ್ತೇವೆ. ಆ ಎಂ.ಎಲ್.ಸಿ ರಿಜಿಸ್ಟರ್ ದಾಖಲೆಯಲ್ಲಿ ಪುಟ ಸಂಖ್ಯೆಯನ್ನು ಸಹಾ ನಮೂದು ಮಾಡುತ್ತೇವೆ ಎಂದರೆ ಸರಿ.

4) ದಿಃ **05.04.2024** ರಂದೇ ಓರ್ವ ಯೋಗೇಶಯ್ಯ ಎಂಬುವವರು ನಮ್ಮ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿದ್ದಾರೆ. ನಿ.ಆರ್.**1** ಮತ್ತು ನಿ.ಆರ್.**2** ಎಂದು ಗುರುತು ಆಗಿರುವ ದಾಖಲೆಗಳಲ್ಲಿ "**RTA two wheeler**

**at 9.00 p.m., near Kempegowda circle today"** ಎಂಬುದಾಗಿ ನಮೂದು ಆಗಿದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.